# ಗುರುತು



“ಪ್ರಾಯಶಃ ನಾನು ಯಾರೆಂದು ನಿಮಗೆ ತಿಳಿಯಲಿಲ್ಲ.”

“ಸುಳ್ಳೇಕೆ ಹೇಳಲಿ? ನಿಮ್ಮನ್ನು ಎಂದಾದರೂ ಕಂಡಿದ್ದೇನೆಂದು ನನಗೆ ಅನಿಸುತ್ತಿಲ್ಲ.”

ಮೊದಲು ಮಾತನಾಡಿದ ವ್ಯಕ್ತಿ ಕ್ಷೀಣವಾಗಿ ನಕ್ಕರು.

“ಅದು ಸರಿ, ನೀವೊಬ್ಬ ಗಣ್ಯ ವ್ಯಕ್ತಿ. ನನ್ನಂಥ ಎಷ್ಟೋ ಜನರನ್ನು ನೀವು ನಿತ್ಯವೂ ನೋಡುತ್ತಲಿರುತ್ತೀರಿ. ಆದರೂ ತಮಗೆ ಗುರುತು ತಿಳಿದೀತೆಂದು ಭಾವಿಸಿದೆ. ಕ್ಷಮಿಸಿ.”

ಎರಡನೆಯ ವ್ಯಕ್ತಿಗೆ ಇಂಥ ಸಂಭಾಷಣೆಗಳು ಹೊಸವಲ್ಲ. ಆದರೂ ಮೆಲ್ಲಗೆ ನಕ್ಕರು.

“ಗಣ್ಯ ವ್ಯಕ್ತಿ – ಪ್ರಸಿದ್ಧ ವ್ಯಕ್ತಿ... ಛೇ ಛೇ... ಅಂಥಾದ್ದೇನಿಲ್ಲ. ನೀವು ನಿಮ್ಮ ಹೆಸರು, ಊರು ಏನಾದರೂ ಸ್ವಲ್ಪ ನೆನಪಿಸಿದರೂ ಸಾಕು, ನನ್ನ ತಲೆಯೊಳಗೆ ಬೆಳಕು ಹರಿಯಬಹುದು.”

“ಬೆಳಕು ಹರಿಯಬಹುದು! ಆಹಾಹಾ... ಬೆಳಕು ಹರಿಯಬಹುದು! ಎಷ್ಟು ಒಳ್ಳೆಯ ಮಾತು! ತಮ್ಮ ಮಾತುಗಳೇ ಹಾಗೆ. ಒಂದು ವಿಶೇಷ ರೀತಿಯಲ್ಲಿ ನಮ್ಮನ್ನು ಪ್ರಭಾವಿಸಿಬಿಡುತ್ತವೆ. ಬದುಕಿನ ಎಲ್ಲಾ ಹಂತಗಳಲ್ಲೂ ಹಾಗೇ ಅಲ್ಲವೆ, ಬೆಳಕು ಹರಿದಾಗ ಎಲ್ಲವೂ ನಿಚ್ಚಳ. ಕತ್ತಲಲ್ಲಿ ಎಲ್ಲವೂ ಅಸ್ಪಷ್ಟ. ಬದುಕೆಲ್ಲ ಕತ್ತಲು ಬೆಳಕಿನಾಟ. ಮತ್ತೆ ಬೆಳಕಿನಿಂದ ಕತ್ತಲಿಗೆ ಹೋಗುವುದೂ ಇದೆ!”

“ಈಗ ನಾನು ನಿಮ್ಮನ್ನು ಮರೆತ ಹಾಗೆ.”